# ಕರ್ನಾಟಕ ವಿಧಾನ ಪರಿಷತ್ತು.

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 934 |
| ಸದಸ್ಯರ ಹೆಸರು | : | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ). |
| ಉತ್ತರಿಸಬೇಕಾದ ದಿನಾಂಕ | : | 27.12.2022 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು. |

********

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರದಲ್ಲಿ ರಚಿಸಿರುವ ವಿವಿಧ ನಮೂನೆ ನಿವೇಶನಗಳ ಸಂಖ್ಯೆ ಎಷ್ಟು; ಅದರಲ್ಲಿ ಹಂಚಿಕೆಯಾಗಿರುವ ನಾಗರೀಕ ನಿವೇಶನ, ವಾಣಿಜ್ಯ ನಿವೇಶನ ಮತ್ತು ಮೂಲೆ ನಿವೇಶನ ಹಾಗೂ ಇತರೆ ನಿವೇಶನಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರದಲ್ಲಿ ರಚಿಸಿರುವ ವಿವಿಧ ನಮೂನೆ ನಿವೇಶನಗಳ ಸಂಖ್ಯೆ ಹಾಗೂ ಹಂಚಿಕೆಯಾಗಿರುವ ನಾಗರೀಕ ನಿವೇಶನ, ವಾಣಿಜ್ಯ ನಿವೇಶನ ಮತ್ತು ಮೂಲೆ ನಿವೇಶನ ಹಾಗೂ ಇತರೆ ನಿವೇಶನಗಳ ವಿವರವನ್ನು **ಅನುಬಂಧ-1** ರಲ್ಲಿರಿಸಿದೆ. |
| (ಆ) | ನಗರಾಭಿವೃದ್ಧಿ ಕಾರ್ಯ್ವಯಂತೆ ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸುವ ಬಡಾವಣೆಯನ್ನು 5 ವರ್ಷಗಳಲ್ಲಿ ಅಭಿವೃದ್ಧಿಪಡಿಸಿ ಸಂಪೂರ್ಣ ಮೂಲಭೂತ ಸೌಕರ್ಯ ಕಲ್ಪಿಸಿ ಸಾರ್ವಜನಿಕರಿಗೆ ನೀಡಬೇಕಿರುವುದು ನಿಜವೇ; | ಹೌದು |
| (ಇ) | ಹಾಗಿದ್ದಲ್ಲಿ, ಮಂಡ್ಯ ಪ್ರಾಧಿಕಾರವು ವಿವೇಕಾನಂದ ನಗರ ಬಡಾವಣೆ ನಿರ್ಮಾಣಗೊಳಿಸಿ 20 ವರ್ಷ ಕಳೆದರೂ ಯಾವುದೇ ಮೂಲಭೂತ ಸೌಕರ್ಯ ಕಲ್ಪಸದೆ ಮಳೆಗಾಲದಲ್ಲಿ ಬಡಾವಣೆ ಸಂಪೂರ್ಣ ಜಲಾವೃತಗೊಂಡು ಜನರು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಿ, ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ನಅಇ/370/ಮೈಅಪ್ರಾ/ 2016 ದಿನಾಂಕ: 23.09.2020 ರಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ವಿವೇಕಾನಂದ ನಗರ ಬಡಾವಣೆಗೆ ಕುಡಿಯುವ ನೀರು ಸರಬರಾಜು ಹಾಗೂ ಒಳಚರಂಡಿ ಕಲ್ಪಿಸುವ ಒಟ್ಟು ರೂ.16.46 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.<br><br>ಇದರಲ್ಲಿ ಕ್ರಮವಾಗಿ ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ರೂ. 4.57 ಕೋಟಿ ಹಾಗೂ ಒಳಚರಂಡಿ ಕಾಮಗಾರಿಗೆ ರೂ.11.89 ಕೋಟಿಗಳ ಕಾಮಗಾರಿಯನ್ನು ಠೇವಣಿ ಕೊಡುಗೆ ಆಧಾರ ಮೇಲೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ವಿಭಾಗದ ವತಿಯಿಂದ ಕೈಗೊಳ್ಳಲು ವಹಿಸಲಾಗಿರುತ್ತದೆ. ದಿನಾಂಕ: 26-06-2021ರ ವರೆಗೆ ರೂ.8.23 ಕೋಟಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಠೇವಣಿಕರಿಸಲಾಗಿದೆ. |

| | | |
|---|---|---|
| | | ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು ರವರು ದಿನಾಂಕ: 13.09.2021 ರಲ್ಲಿ ಸದರಿ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುತ್ತಾರೆ ಮತ್ತು ಮುಖ್ಯ ಅಭಿಯಂತರರು ದಿನಾಂಕ:01-10-2021 ರಲ್ಲಿ ಟೆಂಡರ್ ಆಹ್ವಾನಿಸಿದ್ದು, ದಿನಾಂಕ:01-01-2022 ರಂದು ಆರ್ಥಿಕ ಬಿಡ್‌ನ್ನು ತೆರೆಯಲಾಗಿದ್ದು, ದಿನಾಂಕ: 15.03.2022ರಂದು ಕಾಮಗಾರಿಯನ್ನು ಗುತ್ತಿಗೆದಾರರಿಗೆ ಹಸ್ತಾಂತರ ಮಾಡಿದ್ದು, ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ. |
| (ಈ) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಹಂಚಿಕೆಯಾಗದೆ ಉಳಿದಿರುವ ನಾಗರೀಕ ನಿವೇಶನ ಮೂಲ ನಿವೇಶನ ವಾಣಿಜ್ಯ ನಿವೇಶನ ಹಾಗೂ ಇತರೆ ನಿವೇಶನಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಹಂಚಿಕೆಯಾಗದೆ ಉಳಿದಿರುವ ನಾಗರೀಕ ನಿವೇಶನ, ಮೂಲ ನಿವೇಶನ ವಾಣಿಜ್ಯ ನಿವೇಶನ ಹಾಗೂ ಇತರ ನಿವೇಶನಗಳ ಮಾಹಿತಿಯನ್ನು **ಅನುಬಂಧ-2**ರಲ್ಲಿರಿಸಿದೆ. |

ಸಂಖ್ಯೆ: ನಅಇ 412 ಮೈಅಪ್ರಾ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು
(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

ವಿವೇಕಾನಂದ ನಗರ ಬಡಾವಣೆಯನ್ನು 1998 ರಂದು ರಚಿಸಲಾಗಿರುತ್ತದೆ.

ವಿವೇಕಾನಂದ ನಗರ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಮಧ್ಯಂತರ, ಮೂಲೆ, ವಾಣಿಜ್ಯ ಹಾಗೂ ಸಿ.ಎ.ನಿವೇಶನಗಳ ವಿವರಗಳು

| ಕ್ರಸಂ | ವಿವರಗಳು | ಹಂಚಿಕೆಯಾಗಿರುವ ನಿವೇಶನ |
|---|---|---|
| 1 | ಮಧ್ಯಂತರ | 2265 |
| 2 | ಮೂಲೆ ನಿವೇಶನ | 94 |
| 3 | ವಾಣಿಜ್ಯ ನಿವೇಶನ | 28 |
| 4 | ಸಿ.ಎ.ನಿವೇಶನ | 44 |
| | ಒಟ್ಟು ನಿವೇಶನ | **2431** |

ಆಯುಕ್ತರು,
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ,
ಮಂಡ್ಯ 13/12/22

## ಅನುಬಂಧ–2

### ಸಾಹುಕಾರ ಚನ್ನಯ್ಯ ಬಡಾವಣೆಯಲ್ಲಿ ಖಾಲಿ ಇರುವ ಮಧ್ಯಂತರ ಮತ್ತು ಮೂಲೆ ನಿವೇಶನಗಳ ವಿವರಗಳು

| ಕ್ರಸಂ | ವಿವರಗಳು | ಖಾಲಿ ಇರುವ ನಿವೇಶನ |
|---|---|---|
| 1 | ಮಧ್ಯಂತರ | Nil |
| 2 | ಮೂಲೆ ನಿವೇಶನ | Nil |
| | ಒಟ್ಟು ನಿವೇಶನ | Nil |

### ಸಾತನೂರು ಬಡಾವಣೆಯಲ್ಲಿ ಖಾಲಿ ಇರುವ ಮಧ್ಯಂತರ, ಮೂಲೆ, ವಾಣಿಜ್ಯ ಹಾಗೂ ಸಿ.ಎ.ನಿವೇಶನಗಳ ವಿವರಗಳು

| ಕ್ರಸಂ | ವಿವರಗಳು | ಖಾಲಿ ಇರುವ ನಿವೇಶನ |
|---|---|---|
| 1 | ಮಧ್ಯಂತರ | 33 |
| 2 | ಮೂಲೆ ನಿವೇಶನ | 74 |
| 3 | ವಾಣಿಜ್ಯ ನಿವೇಶನ | 19 |
| 4 | ಸಿ.ಎ.ನಿವೇಶನ | 6 |
| | ಒಟ್ಟು ನಿವೇಶನ | 132 |

## ವಿವೇಕಾನಂದ ನಗರ ಬಡಾವಣೆಯಲ್ಲಿ ಖಾಲಿ ಇರುವ ಮಧ್ಯಂತರ, ಮೂಲೆ, ವಾಣಿಜ್ಯ ಹಾಗೂ ಸಿ.ಎ.ನಿವೇಶನಗಳ ವಿವರಗಳು

| ಕ್ರ ಸಂ | ವಿವರಗಳು | ಖಾಲಿ ಇರುವ ನಿವೇಶನ |
|---|---|---|
| 1 | ಮಧ್ಯಂತರ | 34 |
| 2 | ಮೂಲೆ ನಿವೇಶನ | 255 |
| 3 | ವಾಣಿಜ್ಯ ನಿವೇಶನ | 114 |
| 4 | ಸಿ.ಎ.ನಿವೇಶನ | 14 |
| | **ಒಟ್ಟು ನಿವೇಶನ** | **417** |

ಆಯುಕ್ತರು,
ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ,
ಮಂಡ್ಯ 13/11/12